# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಎಚ್. ರಸ್ತೆ, ತುಮಕೂರು - 572 103


**ಸಂಖ್ಯೆ: ತುವಿ:ಸಂ.ವಿ:2020-21:**8723 **ದಿನಾಂಕ: 12.05.2020**

## ಸುತ್ತೋಲೆ

**ವಿಷಯ:** 2013-14ನೇ ಸಾಲಿನ ಸಂಶೋಧನಾರ್ಥಿಗಳಿಗೆ ಮಹಾ ಪ್ರಬಂಧವನ್ನು ಸಲ್ಲಿಸುವ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಯವರ ಅನುಮೋದನೆ (ಕಂಡಿಕೆ–217) ದಿನಾಂಕ: 12.05.2020.

* * * *

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, 2013-14ನೇ ಸಾಲಿನ ಕಲಾ, ವಾಣಿಜ್ಯ ಮತ್ತು ವ್ಯವಹಾರ ನಿರ್ವಹಣೆ ಹಾಗೂ ವಿಜ್ಞಾನ ವಿಷಯಗಳ ಸಂಶೋಧನಾರ್ಥಿಗಳ ಪಿಹೆಚ್.ಡಿ ಸಂಶೋಧನೆಯ ಅವಧಿಯು ದಿನಾಂಕ:17.05.2020 ಕ್ಕೆ ಮುಕ್ತಾಯಗೊಳ್ಳುತ್ತಿರುವುದರಿಂದ ವಿದ್ಯಾರ್ಥಿಗಳು ತಮ್ಮ ಸಂಶೋಧನಾ ಮಹಾಪ್ರಬಂಧಗಳ ಸಾಫ್ಟ್‌ಕಾಫಿಯನ್ನು CD ರೂಪದಲ್ಲಿ ಮಾರ್ಗದರ್ಶಕರ ಹಾಗೂ ವಿಭಾಗದ ಮುಖ್ಯಸ್ಥರ ಮುಖಾಂತರ ದಿನಾಂಕ:17.05.2020 ರೊಳಗಾಗಿ ಹಾಗೂ ಸದರಿ ಮನವಿಯ ಪತ್ರದಲ್ಲಿ ಸಂಶೋಧನಾರ್ಥಿಗಳಿಗೆ ವಿದ್ವತ್ ಸಭೆಯಲ್ಲಿ ತಿಳಿಸಿರುವ ಸಲಹೆಗಳನ್ನು ಮಹಾಪ್ರಬಂಧದಲ್ಲಿ ಪರಿಷ್ಕರಿಸಿರುವ ಕುರಿತು ವಿಭಾಗದ ಮುಖ್ಯಸ್ಥರಿಂದ ದೃಢೀಕರಿಸಿ ಸಲ್ಲಿಸುವುದು. ಮುಂದುವರೆದು, ಕೋವಿಡ್–19 ಲಾಕ್ ಡೌನ್ ಅವಧಿಯ ಮುಕ್ತಾಯಗೊಂಡ 15 ದಿನಗಳೊಳಗಾಗಿ ಸಂಶೋಧನಾರ್ಥಿಗಳು ಸಮುಚಿತ ಮಾರ್ಗದ ಮೂಲಕ ಮಹಾಪ್ರಬಂಧದ 04 ಹಾರ್ಡ್ ಕಾಫಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವುದು.

**ಸೂಚನೆ: ದಿನಾಂಕ:17.05.2020 ರಂದು ವಿಶ್ವವಿದ್ಯಾನಿಲಯದ ಪಿಹೆಚ್.ಡಿ ವಿಭಾಗವು ಎಂದಿನಂತೆ ತೆರೆದಿರುತ್ತದೆ ಹಾಗೂ ಸದರಿ ಸುತ್ತೋಲೆಯನ್ನು ವಿಭಾಗದ ಮುಖ್ಯಸ್ಥರು ಸಂಶೋಧನಾರ್ಥಿಗಳು ಮತ್ತು ಮಾರ್ಗದರ್ಶಕರ ಗಮನಕ್ಕೆ ತರತಕ್ಕದ್ದು.**

12/05

**ಕುಲಸಚಿವರು**

ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

**ಗೆ,**

**2013-14ನೇ ಸಾಲಿನ ಸಂಬಂಧಪಟ್ಟ ಸಂಶೋಧನಾರ್ಥಿಗಳು**

**ಪ್ರತಿಗಳು:**

1. ಸಂಬಂಧಿಸಿದ ಡೀನರುಗಳು/ಮುಖ್ಯಸ್ಥರು/ಮಾರ್ಗದರ್ಶಕರು
2. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಕಚೇರಿ ಪ್ರತಿ